# ಅಧಿಕ ಸಿವಿಲ್ ಜಡ್ಜ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ ರೋಣ

ಸಿ.ಸಿ. ನಂ.487/2019

**ಫಿರ್ಯಾದಿದಾರರು:-** ಕರ್ನಾಟಕ ಸರ್ಕಾರ (ರೋಣ ಪೋಲಿಸ್)

**ವಿರುದ್ಧ**

**ಆರೋಪಿತರು:-**

1) ರಾಮಪ್ಪ ತಂದೆ ಕೆಂಚಪ್ಪ ಚಿಕ್ಕಣ್ಣವರ,
ವಯಾಃ 55 ವರ್ಷ, ಉದ್ಯೋಗಃ ಶೇತ್ಕಿ
ಸಾಃ ಮೆಣಸಗಿ, ತಾಃ ರೋಣ, ಜಿಃ ಗದಗ.

2) ಮಲ್ಲಿಕಾರ್ಜುನ ಉರ್ಫ್ ಮಲಕಾಜಪ್ಪ ತಂದೆ ರಾಮಪ್ಪ ಚಿಕ್ಕಣ್ಣವರ,
ವಯಾಃ 21 ವರ್ಷ, ಉದ್ಯೋಗಃ ಶೇತ್ಕಿ
ಸಾಃ ಮೆಣಸಗಿ, ತಾಃ ರೋಣ, ಜಿಃ ಗದಗ.

3) ಪ್ರವೀಣ ತಂದೆ ರಾಮಪ್ಪ ಚಿಕ್ಕಣ್ಣವರ,
ವಯಾಃ 18 ವರ್ಷ, ಉದ್ಯೋಗಃ ಶೇತ್ಕಿ
ಸಾಃ ಮೆಣಸಗಿ, ತಾಃ ರೋಣ, ಜಿಃ ಗದಗ.

4) ಪಾರವ್ವ ಕೋಂ ರಾಮಪ್ಪ ಚಿಕ್ಕಣ್ಣವರ,
ವಯಾಃ 48 ವರ್ಷ, ಉದ್ಯೋಗಃ ಹೊಲಮನೆ ಕೆಲಸ,
ಸಾಃ ಮೆಣಸಗಿ, ತಾಃ ರೋಣ, ಜಿಃ ಗದಗ.

5) ಉಮೇಶ ಉರ್ಫ್ ಓಮಪ್ಪ ತಂದೆ ಕೆಂಚಪ್ಪ ಚಿಕ್ಕಣ್ಣವರ,
ವಯಾಃ 52 ವರ್ಷ, ಉದ್ಯೋಗಃ ಶೇತ್ಕಿ
ಸಾಃ ಮೆಣಸಗಿ, ತಾಃ ರೋಣ, ಜಿಃ ಗದಗ.

6) ಮುತ್ತವ್ವ ಕೋಂ ಉಮೇಶ ಉರ್ಫ್ ಓಮಪ್ಪ ಚಿಕ್ಕಣ್ಣವರ,
ವಯಾಃ 42 ವರ್ಷ, ಉದ್ಯೋಗಃ ಹೊಲಮನೆಕೆಲಸ,
ಸಾಃ ಮೆಣಸಗಿ, ತಾಃ ರೋಣ, ಜಿಃ ಗದಗ.

## ದೋಷಾರೋಪಣೆ

ಶ್ರೀ. ಸಚಿನ್ ಹೆಚ್. ಆರ್. ಬಿ.ಎ., ಎಲ್.ಎಲ್.ಬಿ., ಅಧಿಕ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರು ರೋಣ ಆದ ನಾನು ನಿಮ್ಮಗಳ ವಿರುದ್ಧ ಮಾಡುತ್ತಿರುವ ದೋಷರೋಪಣೆ ಏನೆಂದರೆ:-

ರೋಣ ಪೋಲಿಸ್ ಠಾಣೆಯ ಹದ್ದಿ ಪೈಕಿ ಮೆಣಸಗಿ ಗ್ರಾಮದ ಚಾಸಾ-1 ನೇದ್ದವರ ದೊಡ್ಡ ಅಜ್ಜ ನಿಂಗಪ್ಪ ಅಯ್ಯಪ್ಪ ಚಿಕ್ಕಣ್ಣವರ ಇವರಿಗೆ ಮಕ್ಕಳು ಇಲ್ಲದ್ದರಿಂದ ಅವರು ಸಾಯುವ ಮುಂಚೆ ತನ್ನ ಹೆಸರಿನಲ್ಲಿದ್ದ ಆಸ್ತಿಯನ್ನು ಚಾಸಾ-1 ರವರ ಹೆಸರಿಗೆ ನೋಂದಾಯಿತ ಮೃತ್ಯು ಪತ್ರವನ್ನು ಉಪ ನೋಂದಣಿ ಕಛೇರಿ ರೋಣದಲ್ಲಿ ನೊಂದು ಮಾಡಿದ್ದು, ನಿಂಗಪ್ಪ ಅಯ್ಯಪ್ಪ ಚಿಕ್ಕಣ್ಣವರ ತೀರಿಕೊಂಡ ನಂತರ ಸದರಿ ಆಸ್ತಿಗಳನ್ನು ಚಾಸಾ-1 ರವರು ಸಾಗುವಳಿ ಮಾಡುತ್ತಿರುವುದಕ್ಕೆ ಆರೋಪಿತರಾದ ನೀವು ಹಾಗೂ 7 ನೇ ಆರೋಪಿಯು ಸಿಟ್ಟಾಗಿ ಸದರಿ ಆಸ್ತಿಯಲ್ಲಿ ನಮಗೂ ಪಾಲು ಬರುತ್ತದೆ ಅಂತಾ ಚಾಸಾ-1 ಹಾಗೂ ಅವರ ಮನೆಯ ಜನರೊಂದಿಗೆ ತಂಟೆ ತಕರಾರು ಮಾಡುತ್ತಾ ಬಂದಿದ್ದು, ದಿನಾಂಕ 20/10/2018 ರಂದು ರಾತ್ರಿ 08-00 ಗಂಟೆ ಸುಮಾರಿಗೆ ಆರೋಪಿತರಾದ ನೀವು ಮತ್ತು 7 ನೇ ಆರೋಪಿಯು ಸಂಗನಮತ ಮಾಡಿಕೊಂಡು ಅಕ್ರಮಕೂಟ ನಿರ್ಮಿಸಿದ ಪರಿಣಾಮ ಈ ಮೂಲಕ ಭಾ.ದಂ.ಸಂ. ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

7/8

2. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮತ್ತು 7 ನೇ ಆರೋಪಿಯು ಅಪರಾಧ ಮಾಡುವ ಏಕೊದ್ದೇಶವನ್ನು ಹೊಂದಿ ಗೈರಹಾಯ್ದೆಶೀರ ಮಂಡಳಿಯಾಗಿ ಚಾಸಾ-1 ರವರ ಮನೆಯ ಮುಂದೆ ಬಂದ ಪರಿಣಾಮ ಈ ಮೂಲಕ ಭಾ.ದಂ.ಸಂ. ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

3. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮತ್ತು 7 ನೇ ಆರೋಪಿಯು ಅಪರಾಧ ಮಾಡುವ ಏಕೊದ್ದೇಶವನ್ನು ಹೊಂದಿ ಅಕ್ರಮ ಗುಂಪು ಕೂಡಿಕೊಂಡು ಕೈಯಲ್ಲಿ ಕಟ್ಟಿಗೆಯನ್ನು ಹಿಡಿದುಕೊಂಡು ಅಕ್ರಮ ಕೂಟ ನಿರ್ಮಿಸಿದ ಪರಿಣಾಮ ಈ ಮೂಲಕ ಭಾ.ದಂ.ಸಂ. ಕಲಂ 148 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ

4. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ 1, 2 ಮತ್ತು 5 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ, 5 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ, 4 ಮತ್ತು 6 ನೇ ಆರೋಪಿತರಾದ ನೀವು ಚಾಸಾ-5 ರವರಿಗೆ ಹಾಗೂ 1 ಮತ್ತು 5 ನೇ ಆರೋಪಿತರಾದ ನೀವು ಚಾಸಾ-6 ರವರಿಗೆ ಕೈಗಳಿಂದ ಸಿಕ್ಕ ಸಿಕ್ಕಲ್ಲಿ ಹೊಡಿಬಡಿ ಮಾಡಿರುತ್ತೀರಿ ಈ ಮೂಲಕ ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

5. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ತನ್ನ ಕೈಯಲ್ಲಿದ್ದ ಕಲ್ಲಿನಿಂದ ಬಲಗಡೆ ಬುಜಕ್ಕೆ ಹೊಡೆದು ಒಳನೋವು ಪಡಿಸಿರುತ್ತೀರಿ ಈ ಮೂಲಕ ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

6. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ 6 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ತನ್ನ ಕೈಯಲ್ಲಿದ್ದ ಚಪ್ಪಲಿಯಿಂದ ಬಲಗಡೆ ಹಣೆಗೆ, ಕಪಾಳಕ್ಕೆ ಹೊಡೆದಿದ್ದು, ಚಪ್ಪಲಿಯಲ್ಲಿದ್ದ ಮಳಿಯು ಚಾಸಾ-1 ರವರ ಹಣೆಗೆ, ಕಪಾಳಕ್ಕೆ ಹರಿದು ತೆರಚಿದ ಗಾಯವಾಗಿ ರಕ್ತ ಬರುವಂತೆ ಮಾಡಿರುತ್ತೀರಿ ಈ ಮೂಲಕ ಭಾ.ದಂ.ಸಂ. ಕಲಂ 355 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

7. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ 5 ನೇ ಆರೋಪಿಯಾದ ನೀವು ಚಾಸಾ-5 ರವರ ಎಡಗೈಯನ್ನು ತಿರುವಿ ಕೈಯಿಂದ ಸಿಕ್ಕಸಿಕ್ಕಲ್ಲಿ ಹೊಡಿಬಡಿ ಮಾಡಿ, ಅವರ ಕೈ ಹಿಡಿದು ಎಳೆದಾಡಿ ಅವಮಾನ ಪಡಿರುತ್ತೀರಿ ಈ ಮೂಲಕ ಭಾ.ದಂ.ಸಂ. ಕಲಂ 354 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

8. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಹಾಗೂ 7 ನೇ ಆರೋಪಿಯು ಗೈರಕಾಯ್ದೇಶೀರ ಮಂಡಳಿಯಾಗಿ ಕೂಡಿಕೊಂಡು ಬಂದವರೇ ಏನ ಲೇ ಬೋಸುಡಿ ಮಕ್ಕಳಾ ನಮ್ಮ ಹೊಲನಾ ಯಾಕ ಬಿತ್ತಿರಿ ನಿಮ್ಮ ಸೊಕ್ಕು ಬಹಳ ಆಗೈತಿ ಊರಾಗ ಹಡಸಿ ಮಕ್ಕಳಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿ ಸಾರ್ವಜನಿಕ ಉಪದ್ರಮ ಉಂಟು ಮಾಡಿರುತ್ತೀರಿ ಈ

7/8

ಮೂಲಕ ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

9. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಾಗೂ 7 ನೇ ಆರೋಪಿಯು ಚಾಸಾ-1, 4, 5 ಮತ್ತು 6 ನೇದ್ದವರಿಗೆ ಜೀವದ ಧಮಕಿ ಹಾಕಿರುತ್ತೀರಿ ಈ ಮೂಲಕ ಭಾ.ದಂ.ಸಂ. ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಮೇಲ್ಕಂಡ ಆರೋಪಗಳನ್ನು ಆರೋಪಿತರಾದ ನೀವು ಈ ನ್ಯಾಯಲಯದ ವಿಚಾರಣಾ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ಸದರಿ ಆರೋಪಗಳಿಗೆ ನನ್ನ ಮುಂದೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೀದ್ದೇನೆ.

ದಿನಾಂಕ: 07-08-2021

7/8/2021

ಅಧಿಕ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ, ರೋಣ.

**ಆರೋಪಿತರ ಹೇಳಿಕೆ**

1. ಈ ಮೇಲೆ ಓದಿ ಹೇಳಿದ ದೋಷರೋಪಣೆಯ ನಿಮಗೆ ಅರ್ಥವಾಯಿತೆ?

ಉತ್ತರ:

ಆರೋಪಿ ನಂ.1) ಹೌದು
ಆರೋಪಿ ನಂ.2) ಹೌದು
ಆರೋಪಿ ನಂ.3) ಹೌದು
ಆರೋಪಿ ನಂ.4) ಹೌದು
ಆರೋಪಿ ನಂ.5) ಹೌದು
ಆರೋಪಿ ನಂ.6) ಹೌದು.

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ವಿಚಾರಣೆಯಾಗಬೇಕೆಂದು ಬಯಸುವಿರೋ?

ಉತ್ತರ:

ಆರೋಪಿ ನಂ.1) ನಾನು ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.
ಆರೋಪಿ ನಂ.2) ನಾನು ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು
ಆರೋಪಿ ನಂ.3) ನಾನು ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು
ಆರೋಪಿ ನಂ.4) ನಾನು ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು
ಆರೋಪಿ ನಂ.5) ನಾನು ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು
ಆರೋಪಿ ನಂ.6) ನಾನು ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ಆರೋಪಣೆಯನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ: 07-08-2021

7/8/2021

ಅಧಿಕ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ, ರೋಣ.